# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1333**<br>(ಕಂದಾಯ ಇಲಾಖೆಯಿಂದ ವರ್ಗಾವಣೆಗೊಂಡಿದೆ) |
| ಸದಸ್ಯರ ಹೆಸರು | : | ಶ್ರೀ ಸುನೀಲ್‌ಗೌಡ ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17-12-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳೆ ಸಮೀಕ್ಷೆದಾರರು (PR) ಪ್ರತಿ ವರ್ಷ 3 ಅವಧಿಗೆ ಅಂದರೆ ಮುಂಗಾರು, ಹಿಂಗಾರು ಮತ್ತು ಬೇಸಿಗೆಗಳಿಗೆ ಬೆಳೆ ಸಮೀಕ್ಷೆ ಮಾಡುತ್ತಿದ್ದು, ಕಳೆದ 7-8 ವರ್ಷಗಳಿಂದ ಪ್ರತಿ ಜಮೀನಿಗೆ ಕೇವಲ ರೂ.10/- ರಂತೆ ನೀಡುತ್ತಿದ್ದು ಸರಕಾರದ ಗಮನಕ್ಕೆ ಬಂದಿದೆಯೇ; | ಈ ಹಿಂದೆ ಬೆಳೆ ಸಮೀಕ್ಷೆಗಾರರಿಗೆ ರೂ.10/- ರಂತೆ ಗೌರವಧನವನ್ನು ನೀಡಲಾಗುತ್ತಿತ್ತು. ಆದರೆ, ಸರ್ಕಾರದ ಆದೇಶ ಸಂಖ್ಯೆ : ಕೃಇ 56 ಕೃಕೈಉ 2023, ದಿನಾಂಕ: 24.07.2024 ರನ್ವಯ 2024-25ನೇ ಸಾಲಿನ ಮುಂಗಾರು ಹಂಗಾಮಿನಿಂದ ಅನ್ವಯವಾಗುವಂತೆ ಬೆಳೆ ಸಮೀಕ್ಷೆ ಕಾರ್ಯ ನಿರ್ವಹಿಸುವ ಸಮೀಕ್ಷೆದಾರರಿಗೆ ಪ್ರತಿ ತಾಕಿನ (ಪ್ಲಾಟ್) ಮೊದಲ ಬೆಳೆಗೆ ರೂ.11/- ಹಾಗೂ ಹೆಚ್ಚುವರಿ ಬೆಳೆಗೆ ರೂ.5/- ರಂತೆ ಗರಿಷ್ಠ ರೂ.20/- ಗಳಿಗೆ ಗೌರವಧನವನ್ನು ಹೆಚ್ಚಿಸಲಾಗಿದೆ. |
| ಆ) | ಬಂದಿದ್ದರೆ, ಸಹಾಯಧನವನ್ನು ಹೆಚ್ಚಿಸಲು ಮತ್ತು ಬೆಳೆ ಸಮೀಕ್ಷೆದಾರರಿಗೆ ಕಾರ್ಯನಿರ್ವಹಿಸಲು ಮೂಲಭೂತ ಸೌಕರ್ಯಗಳನ್ನು ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು: ಸಹಾಯಧನವನ್ನು ಹೆಚ್ಚಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಏನಾದರು ಇದೆಯೇ; ಈ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು? | ಮುಂದುವರೆದು, ಬೆಳೆ ಸಮೀಕ್ಷೆ ಪ್ರಕ್ರಿಯೆಯು ತಾತ್ಕಾಲಿಕ ಹಾಗೂ ಹಂಗಾಮು ಆಧಾರಿತ ಕಾರ್ಯವಾಗಿದ್ದು, ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಸಮೀಕ್ಷೆದಾರರನ್ನು ಕ್ಷೇತ್ರ ಮಟ್ಟದಲ್ಲಿ ಸಂದರ್ಭಾನುಸಾರ ಬದಲಾವಣೆ ಮಾಡಲಾಗುತ್ತಿರುವುದರಿಂದ ಬೆಳೆ ಸಮೀಕ್ಷೆದಾರರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅವಕಾಶವಿಲ್ಲದಿರುವುದಾಗಿ ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ಉಸ್ತುವಾರಿ ಉಪಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. |

*ಕೃ ಇ 241 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು